ಕೊಟ್ಟಿದ್ದಾರೆ. ಆ ವರದಿಯ ಬಗೆ ಈಗ ನಮ್ಮ ಇಲಾಖೆಯವರು ವ್ಯವಹರಿಸುತ್ತಿದ್ದಾರೆ. ಯಾವ ರೀತಿ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಶೀಘ್ರದಲ್ಲೇ ತೀರ್ಮಾನವಾಗಲಿದೆ. ಈಗಾಗಲೇ ಮೇಲ್ನೋಟಕ್ಕೆ ಅವ್ಯವಹಾರವಾಗಿದೆಯೆಂದು ತೀರ್ಮಾನವಾಗಿರುವುದರಿಂದ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಆದಷ್ಟು ಬೇಗ ಅದರ ಬಗ್ಗೆ ನಾವು ಕ್ರಮವನ್ನು ಕೈಗೊಂಡು ಸನ್ಮಾನ್ಯ ಸದಸ್ಯರಿಗೂ ಕೂಡ ತಿಳಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಪ್ರಶ್ನೆ ಸಂಖ್ಯೆ ೩೭೧ (೧೨೬೩) ಶ್ರೀ ಬಿ. ಎಸ್. ಚವ್ಹಾಣ್‌ರವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಭದ್ರಾವತಿ ತಾಲ್ಲೂಕಿನ ಗೊಂದಿ ಚಾನಲಿನ ಹೂಳು ತೆಗೆಯುವ ಬಗ್ಗೆ

೭೧೯ ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿಯ ಗೊಂದಿ ಚಾನಲ್ ಹೂಳಿನಿಂದ ತುಂಬಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ೧೦ ವರ್ಷಗಳಿಂದಲೂ ಹೂಳು ತೆಗೆಯದಿರುವುದರಿಂದ ಸುಮಾರು ೧೫ ಸಾವಿರ ಎಕರೆ ಜಮೀನಿಗೆ ನೀರಿನ ಪೂರೈಕೆಯಾಗದಿದ್ದರೂ ನೀರಿನ ಕಂದಾಯ ವಸೂಲು ಮಾಡುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಮೇಲ್ಕಂಡ ಎರಡು ವಿಷಯಗಳ ಬಗ್ಗೆ ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ೧೯೮೦–೮೧ನೇ ಸಾಲಿನಿಂದ ಬೆಳೆ ಬೆಳೆಯಲಾದ ವಾಸ್ತವ್ಯ ಅಚ್ಚುಕಟ್ಟು ಪ್ರದೇಶದಲ್ಲಿನ ಕಂದಾಯ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳಿಂದ ಜಂಟಿ ತಪಾಸಣೆಯಾದ ನಂತರ ನೀರಿನ ಕರ ವಿಧಿಸಲಾಗಿದೆ ವಾರ್ಷಿಕ ನಿರ್ವಹಣಾ ಅನುದಾನಕ್ಕನುಸರಿಸಿ ಹೂಳು ಹಾಗೂ ಜೊಂಡು ತೆಗೆಯುವ ಕಾರ್ಯ ಕೈಗೊಳ್ಳಲಾಗಿದೆ. ಹೆಚ್ಚಿನ ಅನುದಾನದ ಅವಶ್ಯಕತೆ ಇದೆ. ಆದರೆ ಹಣದ ಕೊರತೆಯಿಂದ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಇ) ಸುಮಾರು ಎಂಟು ದಶಕಗಳ ಹಿಂದೆ ನಿರ್ಮಾಣವಾಗಿರುವ ಗೊಂದಿ ನಾಲಾ ಸಿಸ್ಟಿಂ ಅನ್ನು ವಿಶ್ವಬ್ಯಾಂಕ್ ನೆರವಿನಿಂದ ಕಾರ್ಯಗತವಾಗುತ್ತಿರುವ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ ಅಡಿಯಲ್ಲಿ ನವೀಕರಣ ಮಾಡುವ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕರಿಯಣ್ಣ.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈಗಾಗಲೇ ತಿಳಿಸಿದ್ದಾರೆ. ಗೊಂದಿ ಚಾನಲ್ ಹೂಳು ತುಂಬಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಆದರೂ ಕೂಡ ವಿಶ್ವಬ್ಯಾಂಕ್ ನೆರವಿನಿಂದ ಕಾರ್ಯಗತವಾಗುತ್ತಿರುವ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ನವೀಕರಣ ಮಾಡುವ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈ ವರ್ಷವೇ ಈ ಕಾರ್ಯವನ್ನು ವಿಶ್ವಬ್ಯಾಂಕ್ ಯೋಜನೆಗೆ ಸೇರಿಸುತ್ತೇವೆ ಎಂಬ ಒಂದು ಭರವಸೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈಗಾಗಲೇ ಸುಮಾರು ಹತ್ತು ವರ್ಷಗಳಿಂದ ಆ ಪ್ರದೇಶದ ಸುಮಾರು ೧೨ ಸಾವಿರ ಎಕರೆ ಪ್ರದೇಶದಲ್ಲಿ ರೈತರು ಬೆಳೆದ ಬೆಳೆಗಳು ನೀರಿನ ಕೊರತೆಯಿಂದ ಅವರ ಕೈಗೆ ಸಿಗುತ್ತಾ ಇಲ್ಲ. ನೀರು ಸರಬರಾಜಿನ ತೊಂದರೆಯಿಂದಾಗಿ ಅವರಿಗೆ ನಷ್ಟ ಉಂಟಾಗಿದೆ. ಆದರೆ ನೀರಾವರಿ ಇಲಾಖೆಯವರು ನೀರಿನ ಕಂದಾಯವನ್ನು ಮಾತ್ರ ಅವರಿಂದ ವಸೂಲು ಮಾಡುತ್ತಾ ಬಂದಿದ್ದಾರೆ. ಈ ಕಂದಾಯವನ್ನು ಕಂದಾಯ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳಿಂದ ಜಂಟಿ ತಪಾಸಣೆ ಆದ ನಂತರ ವಿಧಿಸಲಾಗಿದೆ ಎಂದು ಹೇಳಿದ್ದಾರೆ. ಹೀಗೆ ವಿಧಿಸಲಾದ ಕಂದಾಯವನ್ನು ನೀರು ಉಪಯೋಗಿಸದಿದ್ದವರೂ ಕೂಡ ಹತ್ತು ವರ್ಷಗಳಿಂದ ಅವರು ಕೊಟ್ಟಿದ್ದಾರೆ. ಅಂತಹವರಿಗೆ ಅವರು ಕಟ್ಟಿದ ಕಂದಾಯದ ಹಣವನ್ನು ವಾಪಸ್ಸು ಮಾಡುವ ವ್ಯವಸ್ಥೆಯೇನಾದ್ರೂ ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ,ಗೊಂದಿ ಚಾನಲ್ ಬಹಳ ಹಳಯ ಕಾಲದ ಚಾನಲ್ ಆಗಿದ್ದು. ಸಂಪೂರ್ಣವ್ಗಿ ಹೂಳು ತುಂಬಿಕೊಂಡಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸತ್ಯಾಂಶ ಇದೆ. ಇದರಿಂದಾಗಿ ಬೇಸಿಗೆ ಕಾಲದಲ್ಲಿ ಒಣ ಭೂಮಿಗೆ ನೀರನ್ನು ಒದಗಿಸುವುದು ಕಷ್ಟ ಎಂಬು ನಮಗೆ ಬಂದರತಕ್ಕ ವರದಿಯಿಂದ ವ್ಯಕ್ತವಾಗುತ್ತದೆ ಆದರೆ ಈ ಕೆಲಸಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ವತಿಯಿಂದ ಹಣವನ್ನು ಪಡೆಯತಕ್ಕಂಥಾದ್ದಕ್ಕೆ ೨೨೯.೫೫ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸೇರಿಸಿದ್ದೇವೆ. ಇದರಲ್ಲಿ ಹಿಂದೆ ಮುಂದೆ ನೋಡುವ ಪ್ರಶ್ನೆಯಿಲ್ಲ. ಇದು ಬಹಳ ಅಗತ್ಯವಾಗಿ ಆಗಬೇಕಾಗಿರತಕ್ಕಂಥಾದ್ದು. ಈಗ ಹೂಳು ತುಂಬಿಕೊಂಡಿರುವ ಕಾರಣದಿಂದಾಗಿ ಸುಮಾರು ೨೦ ಸಹಸ್ರ ಎಕರೆ ಪ್ರದೇಶಗಳಿಗೆ ನೀರು ಒದಗಿಸುವುದು ಕಷ್ಟಸಾಧ್ಯವಾಗಿದೆ. ಆದುದರಿಂದ ಈ ಯೋಜನೆಯನ್ನು ಕೇಂದ್ರ ಸರಕಾರದ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ನೆರವನ್ನು ತೆಗೆದುಕೊಂಡು ಕೆಲಸವನ್ನು ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರು ಕಂದಾಯ ವಸೂಲಾತಿಯ ವಿಚಾರವಾಗಿ ಹೇಳಿದ್ದಾರೆ. ನೀರು ಕೊಡದೇನೆ ಕೆಲವರಿಂದ ಕಂದಾಯ ವಸೂಲಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಕುರಿತು ಕಂದಾಯ ಹಾಗೂ ನೀರಾವರಿ ಇಂಜಿನಿಯರಿಂಗ್‌ನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ, ಯಾರು ಈ ನೀರನ್ನು ಬಳಸುತ್ತಿದ್ದಾರೆ ಅವರಿಂದ ಮಾತ್ರ ಕಂದಾಯ ವಸೂಲಿ ಮಾಡಬೇಕೆಂಬ ಸ್ಪಷ್ಟ ಆದೇಶ ಈಗಾಗಲೇ ಹೋಗಿದೆ, ಅದ್ದರಿಂದ ನೀರು ಬಳಸಿಕೊಳ್ಳದ ರೈತರಿಗೆ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ,—ಮಾನ್ಯ ಅಧ್ಯಕ್ಷರೆ, ಗೊಂದಿ ಸಾಲಾದ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರು ನೀರನ್ನು ಹಾಯಿಸಿಕೊಂಡಿದ್ದಾರೆ. ಆದರೆ ಬೆಳೆ ಬಂದಿಲ್ಲ. ಅರ್ಧಂಬರ್ಧ ನೀರನ್ನು ಹಾಯಿಸಿಕೊಂಡು ಬೆಳೆ ಬಂದಿಲ್ಲದೇ ಇದ್ದರೂ ತಾವು ನೀರಿನ ತೆರಿಗೆ ವಸೂಲಿ ಮಾಡುತ್ತೀರೊ ? ಅಥವಾ ಅದನ್ನು ರದ್ದು ಮಾಡುತ್ತೀರೊ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಬೆಳೆಯುವುದು ಬಿಡುವುದಂ ರೈತರಿಗೆ ಸೇರಿರತಕ್ಕಂಥಾದ್ದು. ಆದರೆ ನೀರು ಕೊಟ್ಟ ಮೇಲೆ ಕಂದಾಯ ಕೊಡಬೇಕಲ್ಲವೇ ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ,—ನಾಲೆಯ ದೋಷದಿಂದಾಗಿ ಅವರಿಗೆ ಸರಿಯಾಗಿ ನೀ ರೆ ಬಂದಿಲ್ಲ, ಅದು ಅವರ ತಪ್ಪಲ್ಲವಲ್ಲ ?

ಶ್ರೀ ಕರಿಯಣ್ಣ.—೧೦ ವರ್ಷಗಳಿಂದ ಆ ನಾಲೆಯಿಂದ ನೀರು ಸರಿಯಾಗಿ ಬಾರದೆ ರೈತರ ಬೆಳೆಗೆ ನಷ್ಟವಾಗಿದೆ ಹೀಗೆ ಪರಿಸ್ಥಿತಿ ಇದ್ದರೂ ಕೂಡ ಕಂದಾಯದ ವಸೂಲಾತಿ ಆಗಿದ್ದು, ಅದನ್ನು ವಾಪಸ್ ಕೊಡತಕ್ಕೀರಾ ? ನಿಮ್ಮ ಅಧಿಕಾರಿಗಳೇ ಜಂಟಿಯಾಗಿ ಅದನ್ನು ಪರಿಶೀಲನೆ ಮಾಡಿದಾಗ ವಾಸ್ತವಾಂಶ ತಿಳಿದುಬಂದಿಲ್ಲವೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನೀರನ್ನು ಎಲ್ಲಿ ಒದಗಿಸಲಾಗಿಲ್ಲ ಅಲ್ಲಿ ವಾಟರ್‌ಟ್ಯಾಕ್ಸ್ ಹಾಕ ಬಾರದೆಂದು ಸರ್ಕಾರದ ನಿರ್ಣಯವಿದೆ. ಆದರೆ ನೀರು ಉಪಯೋಗಿಸಿಕೊಂಡವರಿಗೆ ಹಾಕತ್ತೇವೆ. ಆರ್‌ಟಿಸಿಯಲ್ಲಿ ದಾಖಲಾತಿ ಇಲ್ಲದೆ ಇರತಕ್ಕವರಿಂದ ನಾವು ಕಂದಾಯ ವಸೂಲು ಮಾಡುವುದಕ್ಕೆ ಹೋಗುವುದಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಅಧ್ಯಕ್ಷರೇ, ಸರ್ಕಾರ ಮಾಡಿರುವ ತಪ್ಪಿಗೆ ಅವರೇ ಪರಿಹಾರ ಕೊಡಬೇಕು ನಮಗೆ. ಕೋರ್ಟ್‌ಗೆ ಹೋಗಲು ನಮಗೆ ಶಕ್ತಿಯಿಲ್ಲ, ಆ ಕಾರಣದಿಂದ ತಾವು ಪರಿಹಾರ ಕೊಡಿಸುತ್ತೀರಾ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಪರಿಹಾರ ಎಷ್ಟು ಕೊಡಬೇಕಾಗುವುದೆಂದು ಎಸ್ಟಿಮೇಟ್ ಮಾಡಿಸಿ.

ಕಾವೇರಿ ಕೊಳ್ಳದ ಯೋಜನೆಗಳಿಗೆ ೧೯೯೦-೯೧ನೇ ಸಾಲಿನಲ್ಲಿ ನಿಗದಿಯಾದ ಮೊತ್ತ

೬೫೧. ಶ್ರೀ ಸಿ. ಬೈರೇಗೌಡ (ವೇಮಗಲ್) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಾವೇರಿ ಕೊಳದ ಯೋಜನೆಗಳಿಗೆ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ನಿಗದಿ ಮಾಡಿದ್ದ ಮೊತ್ತವೆಷ್ಟು ?